ಶ್ರೀ ಜಗದೀಶ್ ಶೆಟ್ಟರ್ :- ಅವರು ಏನು ಹೇಳುತ್ತಾರೆಂದರೆ, ಆತನನ್ನು ರಿಲೀವ್ ಮಾಡಿಸಿ ಮತ್ತೊಬ್ಬರು ಚಾರ್ಜ್ ತೆಗೆದುಕೊಳ್ಳಲಿ ಎಂದು ಸರ್ಕಾರ ತಕ್ಷಣ ಅದನ್ನು ಮಾಡಬಹುದಲ್ಲವೆ? ಅದರಲ್ಲಿ ಆತ ರಾಜಕೀಯ ಮಾಡುತ್ತಿದ್ದಾನೆ. ಸರ್ಕಾರ ತಕ್ಷಣ ಅದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಕೆ.ಎನ್. ಗಡ್ಡಿ (ಅರಣ್ಯ ರಾಜ್ಯ ಸಚಿವರು) :- ಮಾನ್ಯ ಸದಸ್ಯರು ಏನು ಹೇಳಿದ್ದಾರೆ ಆ ಅಧಿಕಾರಿಯನ್ನು ರಿಲೀವ್ ಮಾಡಿ ಎಂದು.

ಅಧ್ಯಕ್ಷರು :- ಸೀನಿಯರ್ ಮಂತ್ರಿಗಳು ಉತ್ತರ ಹೇಳುತ್ತಾರೆ, ನೀವು ಕುಳಿತುಕೊಳ್ಳಿ.

ಶ್ರೀ ಧರ್ಮಸಿಂಗ್ :- ಮಾನ್ಯ ಸದಸ್ಯರಾದ ಚಿಕ್ಕನಗೌಡ್ರು ನಮ್ಮ ಹತ್ತಿರ ಬರುತ್ತಾರೆ, ಅವರಿಗೆ ಬೇಕಾದ ಇಂಜಿನಿಯರ್‌ರವರು ಅವರ ಕ್ಷೇತ್ರಕ್ಕೆ ಕೊಟ್ಟಿದ್ದೇನೆ, ಅವರಿಗೂ ಈ ವಿಷಯ ಗೊತ್ತಿರಬಹುದು. ನಮ್ಮ ಶಾಸಕರು ಬಂದು ಅವರಿಗೆ ಏಕೆ ಕೊಟ್ಟಿದ್ದೀರಿ ಎಂದರೆ, ಅದಕ್ಕೆ ನಾನು ಇದರಲ್ಲಿ ತಾರತಮ್ಯವೇನೂ ಇಲ್ಲ. ಅವರು ಯಾವುದೇ ಪಕ್ಷದ ಸದಸ್ಯರಾಗಿದ್ದರೂ ಜನಪ್ರತಿನಿಧಿಗಳೆಂದು ಮನ್ನಣೆ ಕೊಟ್ಟಿದ್ದೇನೆ. ಈ ವಿಚಾರ ಈಗ ಬಂದಾಗ ನನಗೆ ಗೊತ್ತಾಗಿದೆ, ಏನಾದರೂ ಆಗಿದ್ದರೆ ಇವತ್ತೇ ನನ್ನ ಹತ್ತಿರ ಬನ್ನಿ, ನಾನು ಆದೇಶ ಮಾಡಿ ಸಂಬಂಧಪಟ್ಟವರಿಗೆ ಹೇಳಿ ತಕ್ಷಣ ಕ್ರಮ ಕೈಗೊಳ್ಳುತ್ತೇನೆ. ಶೂನ್ಯವೇಳೆಯಲ್ಲಿ ಪ್ರಸಾಪ ಮಾಡುವುದಕ್ಕಿಂತಲೂ ಮಾನ್ಯ ಸದಸ್ಯರು ಮಂತ್ರಿಗಳಿಗೆ ಖುದ್ದಾಗಿ ಭೇಟಿಯಾದರೆ ಪರಿಹಾರವಾಗುವುದು ಇದೆ. ನನಗೆ ಇದರ ಬಗ್ಗೆ ಗೊತ್ತಿಲ್ಲ, ಇದಕ್ಕೆ ಸಂಬಂಧಪಟ್ಟವರು ಯಾರು ಮಾಡಿದ್ದಾರೆ, ಏನು ಮಾಡಿದ್ದಾರೆ ಎಂಬುದನ್ನು ನೋಡಿ ಸಂಬಂಧಪಟ್ಟವರಿಗೆ ಕ್ರಮ ತೆಗೆದುಕೊಳ್ಳಲು ಈಗಲೇ ಸೂಚಿಸುತ್ತೇನೆ.

ಅಧ್ಯಕ್ಷರು :- ಮಾನ್ಯ ಚಿಕ್ಕನಗೌಡ್ರೆ ನಿಮ್ಮ ಕೆಲಸವಾಯಿತು ಬಿಡಿ, ಅವರು ಇವತ್ತೇ ಬನ್ನಿ ಎಂದು ಹೇಳಿದ್ದಾರೆ. ಅವರಿಗೆ ಕಳುಹಿಸಿಕೊಡಿ.

ಶ್ರೀ ಎ. ನಾರಾಯಣಸ್ವಾಮಿ :- ಮಾನ್ಯ ಅಧ್ಯಕ್ಷರೆ, ನಾನು ಒಂದು ವಾರದ ಹಿಂದೆ ಕೊಟ್ಟಿದ್ದೇನೆ.

ಅಧ್ಯಕ್ಷರು :- ಸ್ವಾಮಿ, ಇವತ್ತು ನಾನು ಏಳು ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಲಿಕ್ಕೆ ಅವಕಾಶ ಕೊಟ್ಟಿದ್ದೇನೆ, ಇದರ ಜೊತೆಗೆ ಗಮನ ಸೆಳೆಯುವ ಸೂಚನೆಗಳು ಇವೆ, ಬಿಲ್ಸ್ ಇವೆ, ಪ್ರತಿ ದಿನ 5-6 ಅಲೋ ಮಾಡುತ್ತೇನೆ, 6 ದಿವಸಗಳಲ್ಲಿ 6X6-36 ಶೂನ್ಯವೇಳೆಯಲ್ಲಿ ತೆಗೆದುಕೊಳ್ಳಬಹುದು. ಏಕೆ ಅವಸರ ಮಾಡುತ್ತೀರಿ? ಮಾನ್ಯ ಅಶೋಕ್‌ರವರೇ, ನಾಳೆ ನಿಮಗೆ ಅವಕಾಶ ಕೊಡುತ್ತೇನೆ. ಈಗಾಗಲೇ ಒಂದೊಂದು ಪಾರ್ಟಿಗೆ ಎರಡೆರಡು ಕೊಟ್ಟಿದ್ದೇನೆ, ಅವರಿಗೆ ಕೊಟ್ಟಿಲ್ಲ, ಇವತ್ತು ಯಾರ್ಯಾರು ಎದ್ದು ನಿಂತಿದ್ದೀರಿ ನಾಳೆ ಅವರಿಗೆಲ್ಲರಿಗೂ ಅವಕಾಶ ಕೊಡುತ್ತೇನೆ.

ಶ್ರೀ ಬಿ. ಸೋಮಶೇಖರ್ :- ನಾಳೆಯಾದರೂ ನನಗೆ ಗಮನ ಸೆಳೆಯುವ ಸೂಚನೆಯಲ್ಲಿ ಅವಕಾಶ ಕೊಡಬೇಕು.

ಅಧ್ಯಕ್ಷರು :- ಆಗಬಹುದು. ಈಗ ಗಮನ ಸೆಳೆಯುವ ಸೂಚನೆಗಳು.

8. ಗಮನ ಸೆಳೆಯುವ ಸೂಚನೆಗಳು

(ಅ) ಮಂಗಳೂರು ವಿಮಾನ ನಿಲ್ದಾಣಕ್ಕೆ ಜಮೀನು ನೀಡಿದವರಿಗೆ ಪುನರ್ವಸತಿ ಕಲ್ಪಿಸುವ ಬಗ್ಗೆ

ಶ್ರೀ ಕೆ. ವಿಜಯಕುಮಾರ್ ಶೆಟ್ಟಿ (ಸುರತ್ಕಲ್) :- ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನವಮಂಗಳೂರು ಬಂದರು, ಮಂಗಳೂರು ಕೆಮಿಕಲ್ಸ್ ಮತ್ತು ಫರ್ಟಿಲೈಸರ್ಸ್,

ಎಂಆರ್‌ಪಿಎಲ್ ಮತ್ತು ಹೆಚ್‌ಪಿಸಿಎಲ್, ತಣ್ಣೀರುಬಾವಿ ಪ್ರಾಜೆಕ್ಟ್, ಕುದುರೆಮುಖ ಕಂಪನಿ, ನಾಗಾರ್ಜುನ ಕಂಪನಿ, ವಿಮಾನ ನಿಲ್ದಾಣ ಇಂಥ ಅನೇಕ ಸಂಸ್ಥೆಗಳಿಗೆ ಭೂ ಸ್ವಾಧೀನಗೊಳಿಸಲಾಗಿದ್ದು, ನಿರ್ವಸಿತರಿಗೆ ಸರಿಯಾದ ವ್ಯವಸ್ಥೆ ಮಾಡಿ ಪರಿಹಾರ ಮಾಡದಿರುವ ಬಗ್ಗೆ ಹಾಗೂ ಸಂಬಂಧಪಟ್ಟ ಸಂಸ್ಥೆಗಳಲ್ಲಿ ಕೆಲಸ ಸಿಗುವಂತೆ ಮಾಡುವ ಬಗ್ಗೆ ಮಾನ್ಯ ಕಂದಾಯ ಸಚಿವರ ಗಮನ ಸೆಳೆಯ ಬಯಸುತ್ತೇನೆ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) :- ಮಾನ್ಯ ಅಧ್ಯಕ್ಷರೆ, ಮಂಗಳೂರು ವಿಮಾನ ನಿಲ್ದಾಣದ 2ನೇ ರನ್ವೇ ಮತ್ತು ಟರ್ಮಿನಲ್ ಕಾಂಪ್ಲೆಕ್ಸ್ ರಚನೆ ಈ ಯೋಜನೆ ಬಗ್ಗೆ ಮಳವೂರು, ಅಧ್ಯಪಾಡಿ ಮತ್ತು ಕೊಳಂಬೆ ಗ್ರಾಮಗಳಲ್ಲಿ ಒಟ್ಟು 186.33 ಎಕರೆ ಜಮೀನನ್ನು ಭೂಸ್ವಾಧೀನಪಡಿಸಲಾಗಿದೆ. ಈ ಭೂಸ್ವಾಧೀನತೆಯಿಂದ ನಿರ್ವಸಿತರಾದ ಕುಟುಂಬಗಳಿಗೆ ಪುನರ್ವಸತಿ ಸೌಲಭ್ಯಗಳನ್ನು ಕಲ್ಪಿಸುವ ದೃಷ್ಟಿಯಿಂದ ಎರಡು ಪುನರ್ವಸತಿ ಕಾಲೋನಿಗಳನ್ನು ರಚಿಸಿ ಅಭಿವೃದ್ಧಿಪಡಿಸಲಾಗಿದ್ದು, ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದೆ. ಭೂಸ್ವಾಧೀನತೆಯಿಂದ ನಿರ್ವಸಿತ ಕುಟುಂಬಗಳಿಗೆ ಪುನರ್ವಸತಿ ಗ್ರಾಂಟನ್ನು ಮಂಜೂರು ಮಾಡಿ ಪಾವತಿಸಲಾಗಿದೆ.

ಭೂಸ್ವಾಧೀನತೆಯಿಂದ ನಿರ್ವಸಿತರಾಗುವ ಅವಾರ್ಡುದಾರರ ಹಾಗೂ ಮುಖ್ಯಸ್ಥರ ನೆಲೆಗಳನ್ನು ಕಳೆದುಕೊಳ್ಳುವ ನಿರ್ವಸಿತ ಕುಟುಂಬದ ಮುಖ್ಯಸ್ಥರ ಅವಲಂಬನೆಯಲ್ಲಿರುವ 18 ವರ್ಷ ತುಂಬಿದ ಇಬ್ಬರು ಪ್ರಾಪ್ತ ವಯಸ್ಕ ಮಕ್ಕಳಿಗೆ ತಲಾ ರೂ. 70,000-00 ದಂತೆ ಪುನರ್ವಸತಿ ಗ್ರಾಂಟನ್ನು ಸರ್ಕಾರವು ಬಿಡುಗಡೆಗೊಳಿಸಿದ್ದು ಅದರಂತೆ ಒಟ್ಟು 158 ಕುಟುಂಬದ 233 ಮಂದಿ ಮಕ್ಕಳಿಗೆ ತಲಾ ರೂ. 70,000-00 ದಂತೆ ಮೊಬಲಗನ್ನು ಪಾವತಿಸಲಾಗುತ್ತಿದೆ.

ಈ ಯೋಜನೆಯ ಪುನರ್ವಸತಿ ಕಾರ್ಯ ಪ್ರಗತಿಯಲ್ಲಿದ್ದು ಯಾವುದೇ ಸಮಸ್ಯೆ ಇರುವುದಿಲ್ಲ. ಈ ಭೂಸ್ವಾಧೀನತೆಯ ಉದ್ದೇಶವು ಯಾವುದೇ ಯೋಜನೆಯಾಗಿರದೆ ಸಾರ್ವಜನಿಕ ಉದ್ದೇಶದ ವಿಮಾನ ನಿಲ್ದಾಣವನ್ನು ಮೇಲ್ದರ್ಜೆಗೆ ಏರಿಸುವ ಉದ್ದೇಶವನ್ನು ಹೊಂದಿದ್ದು ನಿರ್ವಸಿತ ಕುಟುಂಬಗಳಿಗೆ ಉದ್ಯೋಗ ನೀಡುವ ಬಗ್ಗೆ ಅವಕಾಶಗಳಿರುವುದಿಲ್ಲ.

ಎಂಆರ್‌ಪಿಎಲ್ ಮತ್ತು ಹೆಚ್‌ಪಿಸಿಎಲ್ ಈ ಯೋಜನೆ ಬಗ್ಗೆ 1781.90 ಎಕರೆ ಖಾಸಗಿ ಜಮೀನನ್ನು 609 ಕುಟುಂಬಗಳಿಗೆ ಸ್ಥಳಾಂತರಗೊಂಡಿದ್ದು 547 ಕುಟುಂಬಗಲಿಗೆ ಪುನರ್ವಸತಿ ಕಾಲೋನಿಯಲ್ಲಿ ನಿವೇಶನಗಳನ್ನು ಮಂಜೂರು ಮಾಡಲಾಗಿದೆ. 250 ಕುಟುಂಬಗಳಿಗೆ (ಸಹ ಕುಟುಂಬಗಳು ಸೇರಿ) ನಿವೇಶನದ ಬದಲಾಗಿ ಅದಕ್ಕೆ ಸಂಬಂಧಿತ ಗ್ರಾಂಟನ್ನು ನೀಡಲಾಗಿದೆ. ಈ ಯೋಜನೆಗಳಿಂದ ಬಾಧಿತ ಕುಟುಂಬಗಳ 220 ಮಂದಿಗೆ ಸಂಬಂಧಿಸಿದ ಯೋಜನೆಗಳಲ್ಲಿ ಉದ್ಯೋಗವನ್ನು ನೀಡಲಾಗಿದೆ. 390 ಜನರಿಗೆ ಉದ್ಯೋಗದ ಬದಲು ಪರಿಹಾರ ಧನವನ್ನು ಪಾವತಿಸಲಾಗಿದೆ. ಇನ್ನೂ 23 ಜನರಿಗೆ ಉದ್ಯೋಗ ಅಥವಾ ನಗದು ಪರಿಹಾರವನ್ನು ಸಂಬಂಧಿಸಿದ ಕಂಪನಿಗಳು ನೀಡಬೇಕಾಗಿದ್ದು, ಈ ಪೈಕಿ 10 ಪ್ರಕರಣಗಳಲ್ಲಿ ನಿರ್ವಸಿತ ದೃಢಪತ್ರವನ್ನು ಕಂಪನಿಗೆ ಹಾಜರುಪಡಿಸಿಲ್ಲವೆಂದು ತಿಳಿದು ಬರುತ್ತದೆ ಹಾಗೂ ಬಾಕಿ 13 ಮಂದಿಗೆ ಸಂಬಂಧಿಸಿದಂತೆ ಕಂಪನಿಯವರ ಜೊತೆ ಪರಿಶೀಲನೆ ನಡೆಸಲಾಗುವುದು.

ಚಿಕ್ಕಮಗಳೂರು ಕುದುರೆಮುಖ ಐರನ್ ಓರ್ ಕಂಪನಿ ಈ ಕಂಪನಿಗಾಗಿ ಭೂಸ್ವಾಧೀನಪಡಿಸಿಕೊಂಡ ಜಮೀನುಗಳಿಗೆ ನಿಯಮ ಪ್ರಕಾರ ಪರಿಹಾರ ಪಾವತಿಸಲಾಗಿದೆ.

ಭೂಸ್ವಾಧೀನ ಕ್ರಮದಿಂದಾಗಿ ಒಟ್ಟು 69 ಕುಟುಂಬಗಳು ನಿರ್ವಸಿತರಾಗಿರುತ್ತವೆ. ಸ್ಥಂತ್ರಸ್ಥರ ಪುನರ್ವಸತಿ ಕ್ರಮವಾಗಿ ಈ ಪ್ರತಿಯೊಂದು ಕುಟುಂಬಗಳಿಗೂ ಕಂಪನಿಯಲ್ಲಿ ಉದ್ಯೋಗ ನೀಡಿದ್ದು ಉಚಿತವಾದ ವಾಸದ ಮನೆ ಹಾಗೂ ಅಗತ್ಯ ನಾಗರೀಕ ಸವಲತ್ತುಗಳನ್ನು ಒದಗಿಸಲಾಗಿದೆ.

ಇನ್ನು ಉಳಿದ ನವಮಂಗಳೂರು ಬಂದರು, ಮಂಗಳೂರು ಕೆಮಿಕಲ್ಸ್ ಮತ್ತು ಪರ್ಟಿಲೈಸರ್ಸ್ ಯೋಜನೆಗಳು ತುಂಬಾ ಹಳೆಯ ಯೋಜನೆಗಳಾಗಿದ್ದು, ಈ ಯೋಜನೆಗಳಡಿಯಲ್ಲಿ ನಿರ್ವಸಿತರಾದವರಿಗೆ ಅವಶ್ಯವಿರುವ ಮೂಲಭೂತ ಸೌಲಭ್ಯಗಳನ್ನು ಒದಗಿಸಲಾಗಿದೆ. ಪುನರ್ವಸತಿ ವಿಷಯದಲ್ಲಿ ಯಾವುದೇ ನ್ಯೂನತೆಗಳು ಇರುವುದಿಲ್ಲ.

ಶ್ರೀ ವಿಜಯಕುಮಾರ್ ಶೆಟ್ಟಿ :- ನಿರ್ವಸಿತರಾದವರಿಗೆ ಸದರಿ ಸಂಸ್ಥೆಗಳು ಇನ್ನೂ ಕೆಲಸ ಕೊಟ್ಟಿಲ್ಲ. ಇದಕ್ಕೆ ಸಂಬಂಧಪಟ್ಟಂತೆ ಸರ್ಕಾರ ನಿಜವಾದಂಥ ವ್ಯವಸ್ಥಿತವಾದಂತಹ ಒಂದು ಕಾನೂನನ್ನು ಇದುವರೆಗೂ ಮಾಡಿಲ್ಲ. ನವ ಮಂಗಳೂರು ಬಂದರಿಗೆ ಜಾಗ ಕೊಟ್ಟು ಸುಮಾರು 30 ವರ್ಷಗಳಾಗಿದ್ದರೂ ಸಹ ಅಲ್ಲಿನ ನಿರ್ವಸಿತರಿಗೆ ಒಂದು ಕಾಲೋನಿಯಾಗಲಿ ಅಥವಾ ಇತರೇ ವ್ಯವಸ್ಥೆಯಾಗಲಿ ಅಥವಾ ಯಾವುದೇ ಒಂದು ಪರಿಹಾರವನ್ನು ಕೊಟ್ಟಿಲ್ಲ. ಎಂ.ಆರ್.ಪಿ.ಎಲ್. ಸಂಸ್ಥೆಗೆ ಜಾಗ ಕೊಟ್ಟ ನಿರ್ವಸಿತರು ಸ್ಟ್ರೈಕ್ ಮಾಡಿದ್ದಕ್ಕೆ ಕೂನೇ ಸಂದರ್ಭದಲ್ಲಿ ಅವರೆಲ್ಲರನ್ನೂ ಬಳ್ಳಾರಿ ಜೈಲಿಗೆ ಕಳುಹಿಸುವಂಥ ಒಂದು ವ್ಯವಸ್ಥೆ ಮಾಡಿದ್ದಾರೆ. ಇವತ್ತಿನ ದಿವಸ ಯಾವುದೇ ಒಂದು ಸರ್ಕಾರವಾಗಲಿ, ರಾಜ್ಯ ಸರ್ಕಾರವಾಗಲಿ ಅಥವಾ ಕೇಂದ್ರ ಸರ್ಕಾರವಾಗಲಿ, ಆತುರದಲ್ಲಿ ಈ ಜಾಗವನ್ನು ಖಾಲಿ ಮಾಡಿಸಿದ್ದಾರೆಯೇ ಹೊರತು ಅವರಿಗೆ ನ್ಯಾಯಯುತವಾಗಿ ಕೊಡಲೇಬೇಕಾಗಿರತಕ್ಕಂಥ ಪರಿಹಾರ ವ್ಯವಸ್ಥೆಯನ್ನು ಮಾಡುತ್ತಿಲ್ಲ. ನಮ್ಮ ನಿರ್ವಸಿತರನ್ನು ನಮ್ಮ ರಾಷ್ಟ್ರದ ಯೋಧರ ಜೊತೆಗೆ ಹೋಲಿಕೆ ಮಾಡಬಹುದು ಎನ್ನತಕ್ಕಂಥಾದನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಏಕೆಂದರೆ, ನಮ್ಮ ರಾಷ್ಟ್ರದ ಆರ್ಥಿಕ ವ್ಯವಸ್ಥೆಯನ್ನು ಅಭಿವೃದ್ದಿಪಡಿಸುವುದರಲ್ಲಿ ಈ ನಿರ್ವಸಿತರ ಹೃದಯವಂತಿಕೆಯನ್ನು ನಾವು ನಿಜವಾಗಿಯೂ ಕೂಡ ಮೆಚ್ಚಬೇಕಾಗುತ್ತದೆ. ಆದ್ದರಿಂದ, ಅವರಿಗೆ ಸರಿಯಾದ ವ್ಯವಸ್ಥೆಯನ್ನು ಮಾಡುವುದು ಸರ್ಕಾರದ ಆದ್ಯ ಕರ್ತವ್ಯವೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. 1973ರಲ್ಲಿ ಕರ್ನಾಟಕ ಲ್ಯಾಂಡ್ ಅಕ್ವಿಜಿಷನ್ ಆಕ್ಟ್‌ನ್ನು ಮಾಡಲಾಗಿದೆ. ಇದನ್ನು ಮಾನ್ಯ ಸಚಿವರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ನಿರ್ವಸಿತರಾದವರಿಗೆ ಉದ್ಯೋಗ ಕೊಡುವಂಥ ಒಂದು ವ್ಯವಸ್ಥೆ ಮಾಡಬೇಕೆಂದು ಮಾನ್ಯ ಮಂತ್ರಿಯವರಲ್ಲಿ ಕೇಳಿಕೊಳ್ಳುತ್ತೇನೆ. ಖಾಸಗಿ ಸಂಸ್ಥೆಯವರಿಗೆ 100 ರಿಂದ 1000 ಎಕರೆ ಜಾಗವನ್ನು ಕೊಟ್ಟಿದ್ದೇವೆ. ಆದರೆ, ಇವತ್ತಿನ ದಿವಸ ಅವರನ್ನು ಸರ್ಕಾರ ಕೂಡ ಕೇಳದೇ ಇರತಕ್ಕಂಥ ಪರಿಸ್ಥಿತಿ ಬಂದಿದೆ. ಇವತ್ತಿನ ದಿವಸ ಕೆಲವು ಅಧಿಕಾರಿಗಳು ಬಂದು ಮಂತ್ರಿಯವರು ಏನು ಹೇಳುತ್ತಾರೋ ಅಷ್ಟನ್ನು ಮಾಡಿ ಹೋಗುತ್ತಾರಷ್ಟೆ. ಮಾನ್ಯ ಭರತ್‌ಲಾಲ್ ಮೀನಾ ಮತ್ತು ಮಾನ್ಯ ಮಧು ಎನ್ನತಕ್ಕಂಥ ಒಳ್ಳೆಯ ಅಧಿಕಾರಿಗಳು ಅಲ್ಲಿಗೆ ಬಂದು ನಮಗೆ ಬೇಕಾಗಿರತಕ್ಕಂಥ ವ್ಯವಸ್ಥೆಯನ್ನು ಬಹಳ ಚೆನ್ನಾಗಿ ಮಾಡಿದ್ದಾರೆ. ಈ ರೀತಿಯಾದ ಒಳ್ಳೆಯ ಅಧಿಕಾರಿಗಳು ಬರಬೇಕೆಂದು ನನ್ನ ಅನ್ನಿಸಿಕೆಯಾಗಿದೆ. ಇವತ್ತಿನ ದಿವಸ ಅಲ್ಲಿರತಕ್ಕಂಥ ನಿರ್ವಸಿತರು ಬಹಳ ಸಂಕಷ್ಟದಲ್ಲಿದ್ದಾರೆ. ವಿಮಾನ ನಿಲ್ದಾಣಕ್ಕಾಗಿ ಜಾಗವನ್ನು ಕೊಟ್ಟಂಥ ನಿರ್ವಸಿತರ ಬಗ್ಗೆ ಮಾನ್ಯ ಮಂತ್ರಿಯವರು ಈಗ ಹೇಳಿದ್ದಾರೆ. ಆದರೂ ಸಹ ನಿರ್ವಸಿತರ ಕಾಲೋನಿಗೆ ವಿದ್ಯುತ್ತನ್ನು ನಿಲ್ಲಿಸತಕ್ಕಂಥಾದ್ದು ಮತ್ತು ರಸ್ತೆ ತಡೆ ಮಾಡಿ ಅಲ್ಲಿನ

ನಿರ್ವಸಿತರಿಗೆ ಬಹಳ ಕಿರುಕುಳವನ್ನು ಕೊಡುತ್ತಿದ್ದಾರೆ. ಆದ್ದರಿಂದ ಈಗ ಇರತಕ್ಕಂಥ ಕಾನೂನಿನಲ್ಲಿ ಬದಲಾವಣೆ ಮಾಡತಕ್ಕಂಥಾದ್ದು ಅವಶ್ಯಕತೆ ಇದೆ. ಹಾಗೆಯೇ ನಿರ್ವಸಿತರಿಗೆ ಸರ್ಕಾರ ನೇಮಕಾತಿಯಲ್ಲಿ 50 ಪರ್ಸೆಂಟ್‌ನಷ್ಟು ಮೀಸಲಾತಿ ಕೊಡಬೇಕಾಗುತ್ತದೆ. ಇದರಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಹೊದರು ಪರವಾಗಿಲ್ಲ. ಆದರೆ, ಇವರಿಗೆ ಸೂಕ್ತವಾದ ಒಂದು ವ್ಯವಸ್ಥೆಯನ್ನು ಕಲ್ಪಿಸಿಕೊಡಬೇಕೆಂದು ನಾನು ಮಾನ್ಯ ಸಚಿವರಲ್ಲಿ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) :- ಮಾನ್ಯ ಅಧ್ಯಕ್ಷರೆ, ಸರ್ಕಾರ ಈಗಾಗಲೇ ಹೇಳಿಕೆ ಕೊಟ್ಟಿರುವಂತೆ ಅಲ್ಲಿನ ನಿರ್ವಸಿತರಿಗೆ ಎಲ್ಲಾ ಸೌಲಭ್ಯಗಳನ್ನು ಒದಗಿಸಿಕೊಟ್ಟಿದೆ. ಒಂದು ವೇಳೆ, ಯಾವುದಾದರೊಬ್ಬ ನಿರ್ವಸಿತರಿಗೆ ಇನ್ನು ಸೌಲಭ್ಯ ದೊರಕದೇ ಇದ್ದರೆ, ಅದನ್ನು ದೊರಕಿಸಿಕೊಡತಕ್ಕಂಥ ಪ್ರಯತ್ನ ಮಾಡುತ್ತೇವೆ. ಹಾಗೆಯೇ ನಿರ್ವಸಿತರ ಸಮಸ್ಯೆಗಳನ್ನು ಪರಿಹಾರಕ್ಕೆ ಸರ್ಕಾರ ಬಹಳ ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸುತ್ತಿದೆ. ಒಂದು ವೇಳೆ ಇದರಲ್ಲಿ ಯಾರಾದರೂ ಬಿಟ್ಟು ಹೋಗಿದ್ದರೆ ಅಥವಾ ನಿರ್ವಸಿತರಿಗೆ ಇನ್ನು ಏನಾದರೂ ಸೌಲಭ್ಯಗಳನ್ನು ಕಲ್ಪಿಸಿಕೊಡತಕ್ಕಂಥಾದನ್ನೂ ಮಾನ್ಯ ಸದಸ್ಯರು ತಿಳಿಸಿದರೆ, ಅದನ್ನು ನಾನು ಖಂಡಿತ ಪರಿಶೀಲನೆ ಮಾಡುತ್ತೇನೆ. ಹಾಗೆಯೇ ಕಾನೂನನ್ನು ಅಮೆಂಡ್‌ಮೆಂಟ್ ಮಾಡಬೇಕು ಎನ್ನತಕ್ಕಂಥ ಮಾತನ್ನು ಅವರು ಪ್ರಸ್ತಾಪ ಮಾಡಿದ್ದಾರೆ. ಇವತ್ತಿನ ದಿವಸ ಇರತಕ್ಕಂಥ ಕಾನೂನಿನ ಪ್ರಕಾರ ಅವರಿಗೆ ದೊರೆಯಬೇಕಾದ ಪೂರ್ಣ ಸೌಲಭ್ಯವನ್ನು ಕೊಟ್ಟಿದೆ ಮತ್ತು ಧನ ಸಹಾಯವನ್ನು ಕೂಡ ಮಾಡಿದೆ. ಕಾನೂನಿಗೆ ಅಮೆಂಡ್‌ಮೆಂಟ್ ಮಾಡತಕ್ಕಂಥ ಪರಿಸ್ಥಿತಿ ಬಂದಾಗ ಸರ್ಕಾರ ಇದರ ಬಗ್ಗೆ ಯೋಚನೆ ಮಾಡುತ್ತದೆ.

ಶ್ರೀ ಕೆ. ವಿಜಯಕುಮಾರ್ ಶೆಟ್ಟಿ :- ಮಾನ್ಯ ಅಧ್ಯಕ್ಷರೆ, ಈ ಕಾನೂನನ್ನು 1973ರಲ್ಲಿ ಮಾಡಲಾಗಿದೆ. 1973ರಲ್ಲಿ ನಮ್ಮ ದೇಶದ ಮತ್ತು ನಮ್ಮ ರಾಜ್ಯದ ಪರಿಸ್ಥಿತಿ ಯಾವ ರೀತಿ ಇತ್ತು ಮತ್ತು ಈಗ ಯಾವ ರೀತಿ ಇದೆ ಎನ್ನತಕ್ಕಂಥ ಪರಿಸ್ಥಿತಿಯ ಅನುಗುಣವಾಗಿ ಕಾನೂನನ್ನು ಬದಲಾವಣೆ ಮಾಡತಕ್ಕಂಥ ಅವಶ್ಯಕತೆ ಇದೆ. ದಿನಾಂಕ 17-03-1973ರಲ್ಲಿ ಕರ್ನಾಟಕ ಲ್ಯಾಂಡ್ ಅಕ್ವಿಜಿಷನ್ ಆಕ್ಟ್ ಜಾರಿಗೆ ಬಂದಿದ್ದು, ಅದು ಮೇ ತಿಂಗಳ ಗೆಜೆಟ್‌ನಲ್ಲಿ ಪ್ರಕಟ ಮಾಡಿದ್ದಾರೆ. ಭೂಸ್ವಾಧೀನ ಕಾಯಿದೆ ರೂಲ್ಸ್-5 ಹಾಗೂ ಸೆಕ್ಷನ್ 41ರ ಪ್ರಕಾರ ಭೂಮಿ ಕಳೆದುಕೊಂಡವರಿಗೆ ಉದ್ಯೋಗ ಕೊಡುವುದರ ಬಗ್ಗೆ ಈ ಒಂದು ಆಕ್ಟ್‌ನಲ್ಲಿ ಯಾವುದೇ ಒಂದು ವ್ಯವಸ್ಥೆಯನ್ನು ಮಾಡಿಲ್ಲ. ಆದ್ದರಿಂದ, ಓಬಿರಾಯನ ಕಾಲದ ಈ ಒಂದು ಆಕ್ಟ್‌ನ್ನು ಪ್ರಚಲಿತ ವ್ಯವಸ್ಥೆಗೆ ಅನುಗುಣವಾಗಿ ಬದಲಾವಣೆ ಮಾಡಬೇಕೆಂದು ನಾನು ಮಾನ್ಯ ಮಂತ್ರಿಯವರಲ್ಲಿ ಒತ್ತಾಯ ಮಾಡುತ್ತೇನೆ. ಹಾಗೆಯೇ ಇದರ ಜೊತೆಗೆ, ಅವರಿಗೆ ಈಗಾಗಲೇ ಪರಿಹಾರವನ್ನು ಕೊಡಲಾಗಿದೆ ಎಂದು ಮಾನ್ಯ ಸಚಿವರು ಹೇಳಿದ್ದಾರೆ. ಆದರೆ, ಎಂಆರ್‌ಪಿಎಲ್ ನಿರ್ವಸಿತಗಾರರ ಕಾಲೋನಿಗೆ ಕನಿಷ್ಟ ಬೀಡಿಕೆಯಾದ ನೀರಿನ ವ್ಯವಸ್ಥೆಯನ್ನು ಕೂಡ ಒದಗಿಸಿಕೊಟ್ಟಿಲ್ಲ. ಹಾಗೆಯೇ ಬೀದಿ ದೀಪಗಳಾದ ಟ್ಯೂಬ್‌ಲೈಟ್ ವ್ಯವಸ್ಥೆ ಕೂಡ ಸರಿಯಾಗಿಲ್ಲ. ಮೊನ್ನೆ ದಿವಸ ಸನ್ಮಾನ್ಯ ದೇಶಪಾಂಡೆಯವರು ಬಂದು ಈ ಒಂದು ವ್ಯವಸ್ಥೆಯನ್ನು ಕಲ್ಪಿಸಿಕೊಟ್ಟಿದ್ದಾರೆ. ನಿರ್ವಸಿತರಾಗತಕ್ಕಂಥ ಸಂದರ್ಭದಲ್ಲಿಯೇ ಈ ಒಂದು ವ್ಯವಸ್ಥೆಯನ್ನು ನಾವು ಮಾಡಿಕೊಟ್ಟಿದ್ದರೆ ಅವರ ಮನಸ್ಸಿಗೂ ಸಹ ನಮಗೆ ಅನುಕೂಲ ಮಾಡಿಕೊಟ್ಟಿದ್ದಾರೆ ಎನ್ನತಕ್ಕಂಥ ಭಾವನೆ ಬರುತ್ತಿತ್ತು. ಅಲ್ಲಿನ ವ್ಯವಸ್ಥೆ ಬಗ್ಗೆ ಅಧಿಕಾರಿಗಳು ವರದಿಯನ್ನು ಬರೆದು ಕೊಟ್ಟಿದ್ದಾರೆ. ಆದರೆ, ವಸ್ತುಸ್ಥಿತಿಯನ್ನು ನೋಡಿದರೆ

ಅಲ್ಲಿ ಸರಿಯಾದ ಒಂದು ವ್ಯವಸ್ಥೆ ಇನ್ನೂ ಕೂಡ ಆಗಿಲ್ಲ. ಆದಕ್ಕೋಸ್ಕರ ತಾವು ಹೆಚ್ಚಿನ ನಿಗಾ ವಹಿಸಿ ಅಲ್ಲಿರತಕ್ಕಂಥ ನಿರ್ವಸಿತರಿಗೆ ಸಿಗಬೇಕಾಗಿರತಕ್ಕಂಥ ಎಲ್ಲಾ ವ್ಯವಸ್ಥೆಯನ್ನು ಮಾಡಿಕೊಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ :- ಮಾನ್ಯ ಅಧ್ಯಕ್ಷರೆ, ಜಿಲ್ಲಾ ಉಸ್ತುವಾರಿ ಮಂತ್ರಿಗಳು ಈಗಾಗಲೇ ಅಲ್ಲಿರತಕ್ಕಂಥ ಶಾಸಕರುಗಳ ಒಂದು ಸಭೆ ಮಾಡಿ ಕೆಲವು ಸಮಸ್ಯೆಗಳನ್ನು ಬಗೆಹರಿಸಿದ್ದಾರೆ. ಒಂದು ವೇಳೆ ಅಲ್ಲಿ ಇನ್ನೇನಾದರೂ ಸಮಸ್ಯೆಗಳು ಇದ್ದರೆ, ನಾನು ಆ ಒಂದು ಸ್ಥಳಕ್ಕೆ ಶಾಸಕರ ಜೊತೆ ಭೇಟಿ ನೀಡಿ ಅಲ್ಲಿರತಕ್ಕಂಥ ಸಮಸ್ಯೆಯನ್ನು ಪರಿಹಾರ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಕೆ. ವಿಜಯಕುಮಾರ್ ಶೆಟ್ಟಿ :- ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಸೋಮಶೇಖರ್‌ರರು ಮಂತ್ರಿಯಾಗಿದ್ದಂ ಸಂದರ್ಭದಲ್ಲಿ ಅಲ್ಲಿಗೆ ಬಂದು, ಅವರಿಗೆ ಕೊಡಬೇಕಾಗಿರತಕ್ಕಂಥ ಪರಿಹಾರವನ್ನು ಸ್ವಲ್ಪ ಹೆಚ್ಚಿಗೆ ಮಾಡಿ ಹೋಗಿದ್ದಾರೆ. ನಾನು ಅವರಿಗೆ ಈ ಸಂದರ್ಭದಲ್ಲಿ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಅವರು ಸಂಪೂರ್ಣವಾಗಿ ತಮ್ಮ ಸರ್ವಸ್ವವನ್ನು ತ್ಯಾಗ ಮಾಡಿರುವುದರಿಂದ ಅವರಿಗೆ ನಿರ್ದಷ್ಟವಾದ ಒಂದು ವ್ಯವಸ್ಥೆಯನ್ನು ನಾವು ಮಾಡಿಕೊಡಬೇಕಾಗುತ್ತದೆ. ಒಂದು ಸಲ ಒಬ್ಬರು ಬಂದು ಒಂದು ವ್ಯವಸ್ಥೆ ಮಾಡಿ ಹೋಗುವುದು. ಹಾಗೆಯೇ ಇನ್ನೊಂದು ಸಲ ಇನ್ನೊಬ್ಬ ಅಧಿಕಾರಿ ಬಂದು ಒತ್ತಡಕ್ಕೆ ಮಣಿದು ಮತ್ತೊಂದು ಮಾಡುವುದು ಮತ್ತು ಜನರ ಒತ್ತಡಕ್ಕೆ ಮಣಿದು ಬೇರೊಂದು ಮಾಡುವುದು ಸರಿಯಾದ ವ್ಯವಸ್ಥೆಯಲ್ಲ. ಏರ್‌ಪೋರ್ಟ್ ಪ್ರಾಜೆಕ್ಟ್ ಯಾವಾಗಲೋ ಆಗಬೇಕಾಗಿತ್ತು. ಆದರೆ, ಅಧಿಕಾರಿಗಳ ಬೇಜಾವಾಬ್ದಾರಿತನದಿಂದ ಇದು ತಡವಾಗಿದೆಯಷ್ಟೆ. ಮೊನ್ನೆದಿವಸ ಅಲ್ಲಿರತಕ್ಕಂಥ ನಿರ್ವಸಿತಗಾರರ ಮನೆಗೆ ವಿದ್ಯುತ್ ಕಟ್ ಮಾಡಿದ್ದಾರೆ. ಹಾಗೆಯೇ ಅಲ್ಲಿರತಕ್ಕಂಥ ರಸ್ತೆಗಳನ್ನು ತೋಡಿರುವುದರಿಂದ ಅಲ್ಲಿ ಬಸ್‌ನಲ್ಲಿ ಶಾಲೆಗೆ ಹೋಗಬೇಕಾಗಿರತಕ್ಕಂಥ ಮಕ್ಕಳು ಆಚೆಗೆ ಈಚೆಗೆ ಹೋಗದಂತೆ ಆಗಿದೆ. ಇದು ಸರಿಯಲ್ಲ.

2.00 ಪಿ.ಎಂ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) :- ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಈಗಾಗಲೇ ಅಲ್ಲಿ ಕಿರುಕುಳ ಹಾಗೂ ತೊಂದರೆಗಳು ಏನು ಆಗಿವೆ ಆ ಬಗ್ಗೆ ಸರ್ಕಾರದ ಗಮನಕ್ಕೆ ತಂದಿದ್ದಾರೆ, ನಾನು ಈಗಾಗಲೇ ಹೇಳಿದಂತೆ ಆ ಸ್ಥಳವನ್ನು ಪರಿಶೀಲನೆ ಮಾಡಿ ಸಂಬಂಧಪಟ್ಟ ಶಾಸಕರ ಸಂಗಡ ಹೋಗಿ ಏನು ಸಮಸ್ಯೆಗಳು ಇದ್ದಾವೆ ಎನ್ನುವುದನ್ನು ನೋಡಿ ಸರ್ಕಾರದ ಗಮನಕ್ಕೆ ತೆಗೆದುಕೊಂಡು ಬಂದು ಅದನ್ನು ತೀರ್ಮಾನ ಮಾಡುವ ಪ್ರಯತ್ನವನ್ನು ಮಾಡುತ್ತೇವೆ.

(ಆ) ನಾಗಮಂಗಲ ಮತಕ್ಷೇತ್ರದಲ್ಲಿಯ ಖಾಸಗಿ ಅನುದಾನಿತ ಮಾಡಲ್‌ಗರ್ಲ್ಸ್ ಹೈಸ್ಕೂಲು ಹಾಗೂ ಪದವಿಪೂರ್ವ ಕಾಲೇಜಿನ ಆಡಳಿತ ಮಂಡಳಿಯವರು ಸರ್ಕಾರಿ ನಿಯಮಾನುಸಾರ ನೌಕರರ ನೇಮಕಾತಿ ಮಾಡದೇ ಮತ್ತು ಸದರಿ ಕ್ಷೇತ್ರದಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರನ್ನು ಸಿ.ಆರ್.ಪಿ. ನಿಯೋಜಕರಾಗಿ ಮಾಡದಿರುವುದರ ಬಗ್ಗೆ.

ಶ್ರೀ ಎನ್. ಚಲುವರಾಯಸ್ವಾಮಿ (ನಾಗಮಂಗಲ) :- ಮಾನ್ಯ ಅಧ್ಯಕ್ಷರೆ, ನಾಗಮಂಗಲ ಮತಕ್ಷೇತ್ರದಲ್ಲಿಯ ಖಾಸಗಿ ಅನುದಾನಿತ ಮಾಡಲ್ ಗರ್ಲ್ಸ್ ಹೈಸ್ಕೂಲು ಹಾಗೂ ಪದವಿಪೂರ್ವ